[redacted]

ನರೇಗಾ ಕಾಮಗಾರಿ ಸ್ಥಳದಲ್ಲಿ ಮತದಾನ ಜಾಗೃತಿ

ಕೊಪ್ಪಳ, ಮಾರ್ಚ್ 22 : ಕನಕಗಿರಿ ತಾಲ್ಲೂಕಿನ ಗೌರಿಪುರ ಗ್ರಾ.ಪಂ ವ್ಯಾಪ್ತಿಯ ಅಡವಿಬಾವಿ ತಾಂಡಾದಲ್ಲಿ ಗ್ರಾ.ಪಂ ವತಿಯಿಂದ ಕೂಲಿಕಾರರಿಗೆ ನಾಲಾ ಹೂಳೆತ್ತುವ ಕೆಲಸ ನೀಡಲಾಗಿದ್ದು, ಕಾಮಗಾರಿ ಸ್ಥಳದಲ್ಲಿ ತಾಲ್ಲೂಕು ಸ್ವೀಪ್ ಸಮಿತಿ ವತಿಯಿಂದ ಶುಕ್ರವಾರ ಮತದಾನ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು.

ಈ ವೇಳೆ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಾದ ಚಂದ್ರಶೇಖರ ಕಂದಕೂರ ಅವರು ಮಾತನಾಡಿ, ಕಡ್ಡಾಯವಾಗಿ ಪ್ರತಿಯೊಬ್ಬರೂ ಮತದಾನ ಮಾಡಬೇಕು. ಮತದಾನ ಪವಿತ್ರವಾದದ್ದು, ಯಾರೂ ಮತದಾನದಿಂದ ಹೊರಗುಳಿಯದೇ, ಕಡ್ಡಾಯವಾಗಿ ಮತದಾನ ಮಾಡುವಂತೆ ತಿಳಿಸಿದರು.

ತಾ.ಪಂ ಸಹಾಯಕ ನಿರ್ದೇಶಕರರು ಕೂಲಿಕಾರರಿಗೆ ಮತದಾನ ಪ್ರತಿಜ್ಞಾ ವಿಧಿಯನ್ನು ಬೋಧಿಸಿದರು.

ಬಳಿಕ ತಾ.ಪಂ ಇಓ ಅವರು ಕಾಮಗಾರಿ ಸ್ಥಳವನ್ನು ವೀಕ್ಷಣೆ ಮಾಡಿದರು. ಇದೇ ವೇಳೆ ಅಡವಿಬಾವಿ ತಾಂಡಾ ಹಾಗೂ ಸೋಮಸಾಗರ ಶಾಲೆಯಲ್ಲಿರುವ ಮತದಾನ ಕೇಂದ್ರಕ್ಕೆ ಭೇಟಿ ನೀಡಿ ಬೂತ್ ಗಳನ್ನು ಪರಿಶೀಲನೆ ನಡೆಸಿ ಶಾಲಾ ಶಿಕ್ಷಕರಿಂದ ಮಾಹಿತಿಯನ್ನು ಪಡೆದುಕೊಂಡರು.

ಈ ಸಂದರ್ಭದಲ್ಲಿ ಗ್ರಾ.ಪಂ ಪಿಡಿಓ, ಐಇಸಿ ಸಂಯೋಜಕರು, ತಾಂತ್ರಿಕ ಸಹಾಯಕರು, ಡಿಇಓ, ಬಿಎಫ್.ಟಿ, ಗ್ರಾಮ ಕಾಯಕ ಮಿತ್ರರು ಸೇರಿದಂತೆ ಕೂಲಿಕಾರರು ಹಾಜರಿದ್ದರು.

ಬಿಜೆಪಿಗೆ ತಕ್ಕ ಪಾಠ:ಅಂಜಲಿ ನಿಂಬಾಳ್ಕರ್

ಬೆಳಗಾವಿ. ಉತ್ತರ ಕನ್ನಡದಿಂದ ಮಾಜಿ ಶಾಸಕಿ ಅಂಜಲಿ ನಿಂಬಾಳ್ಕರ್ ಗೆ ಲೋಕಸಭಾ ಟಿಕೆಟ್ ಘೋಷಣೆ ಕಾಂಗ್ರೆಸ್ ಮಾಸ್ಟರ್ ಪ್ಲಾನ್ ರೂಪಿಸಿದೆ ಯೋಜನೆಯಂತೆ ಮಾಜಿ ಶಾಸಕಿ ಡಾ.ಅಂಜಲಿ ನಿಂಬಾಳ್ಕರ್?ಗೆ ಕಾಂಗ್ರೆಸ್ ಟಿಕೆಟ್ ಘೋಷಣೆ ಮಾಡಿದೆ ಮರಾಠರೇ ಅಧಿಕ ಸಂಖ್ಯೆಯಲ್ಲಿರುವ ಕಿತ್ತೂರು, ಖಾನಾಪುರ ಭಾಗದಲ್ಲೇ ಕಾಂಗ್ರೆಸ್??ಗೆ ಪ್ರತಿ ಬಾರಿ ಹಿನ್ನಡೆ ಆಗುತ್ತಿತ್ತು. ಈ ಸಲ ಎಲ್ಲವನ್ನು ಗಣನೆಗೆ ತೆಗೆದುಕೊಂಡು ಕಾಂಗ್ರೆಸ್? ಮರಾಠ ಸಮುದಾಯದ ಅಭ್ಯರ್ಥಿಯಾದ ಮಾಜಿ ಶಾಸಕಿ ಡಾ.ಅಂಜಲಿ ನಿಂಬಾಳ್ಕರ್?ಗೆ ಟಿಕೆಟ್ ಘೋಷಣೆ ಮಾಡಿ ದಾಳ ಉರುಳಿಸಿದೆ. ಕ್ಷೇತ್ರದಲ್ಲಿ ಮರಾಠ ಸಮುದಾಯದ ಮತದಾರರೇ ಅಧಿಕ ಸಂಖ್ಯೆಯಲ್ಲಿದ್ದರಿಂದ ಕಿತ್ತೂರು, ಖಾನಾಪುರ ಭಾಗದಲ್ಲಿ ಕಾಂಗ್ರೆಸ್?ಗೆ ಹಿನ್ನಡೆಯಾಗುತ್ತಿತ್ತು. ಇದನ್ನು ಮನಗಂಡಿರುವ ಕಾಂಗ್ರೆಸ್ ನಾಯಕರು ಬಿಜೆಪಿಗೆ ಟಕ್ಕರ್ ಕೊಡಲು ಮಹಿಳಾ ಅಭ್ಯರ್ಥಿಯನ್ನು ಘೋಷಣೆ ಮಾಡಿದೆ.

ಈ ಕಿತ್ತೂರು, ಖಾನಾಪುರ ಎರಡು ಬೆಳಗಾವಿ ಜಿಲ್ಲೆಗೆ ಬಂದರೂ ಲೋಕಸಭಾ ಚುನಾವಣೆಯಲ್ಲಿ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ. ಬಿಜೆಪಿಯ ಈ ಬಾರಿ ಮತಗಳ ಹಿನ್ನಡೆ ತಡೆಯಲು ಕಾಂಗ್ರೆಸ್ ತಂತ್ರ ರೂಪಿಸಿದೆ. ಇದೇ ಕ್ಷೇತ್ರದಿಂದ ಅನಂತ್ ಕುಮಾರ್ ಹೆಗಡೆ ಆರು ಬಾರಿ ಗೆಲುವು ಪಡೆದಿದ್ದರು. ಈ ಹಿಂದೆ ಒಮ್ಮೆ ಮಾರ್ಗರೇಟ್ ಆಳ್ವಾ ಅವರಿಂದ ಹೆಗಡೆ ಸೋತಿದ್ದರು. ಈಗ ಡಾ. ಅಂಜಲಿ ನಿಂಬಾಳ್ಕರ್ ಅಭ್ಯರ್ಥಿಯಾಗಿದ್ದು ಕ್ಷೇತ್ರದಲ್ಲಿ ಯಾವ ರೀತಿ ಪ್ರಚಾರ ಕಾರ್ಯ ಕೈಗೊಂಡು ಗೆಲುವು ಪಡೆಯುತ್ತಾರೆ ಎಂಬುದು ಕುತೂಹಲ ಮೂಡಿಸಿದೆ.

ಹೆಣ್ಮಕ್ಳೇ ಸ್ಟ್ರಾಂಗು ಅನ್ನೋದು ಇನ್ನೊಮ್ಮೆ ಸಾಬೀತು

ಭವಿಷ್ಯದಲ್ಲಿ ಮಹಿಳಾ ಕ್ರಿಕೆಟ್ ಕೂಡ ಮತ್ತಷ್ಟು ದೊಡ್ಡಮಟ್ಟದಲ್ಲಿ ಬೆಳೆಯುವ ಸಾಧ್ಯತೆ

ಈ ಸಲ ಕಪ್ ನಮ್ದೆ ಅಂತಾ ಪ್ರತಿಸಲವೂ (ನನ್ನಂತಹ ಅಸಂಖ್ಯ) ಡೈ ಹಾರ್ಟ್ ಆರ್‌ಸಿಬಿ ಫ್ಯಾನ್ಸ್ ಕೂಗಿ ಕೂಗಿ ಹೇಳುತ್ತಿದ್ದರೂ, ಹದಿನಾರು ವರ್ಷಗಳಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಪುರುಷರ ತಂಡವು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯಲ್ಲಿ ಮಾಡಲಾಗದ್ದನ್ನು ಮಹಿಳಾ ತಂಡ ಮಾಡಿ ತೋರಿಸಿದೆ. ಈ ಮೂಲಕ ಹೆಣ್ಮಕ್ಳೇ ಸ್ಟ್ರಾಂಗು ಗುರೂ ಅನ್ನೋದು ಇನ್ನೊಮ್ಮೆ ಸಾಬೀತಾಗಿದೆ. ಅಲ್ಲದೇ ಆರ್‌ಸಿಬಿ ಫ್ಯಾನ್ಸ್ ಈ ಸಲ ಕಪ್ ನಮ್ದು ಅಂತಾ ಹೆಮ್ಮೆಯಿಂದ ಕೂಗಿ ಕೂಗಿ ಹೇಳುವಂತಾಗಿದೆ.

ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯ ಎರಡನೇ ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮಹಿಳಾ ತಂಡವು ಕಪ್ ಗೆದ್ದು ಇಂತಹದೊಂದು ಅಮೋಘ ಸಾಧನೆ ಮಾಡಿದ್ದು, ಈ ಗೆಲುವಿನ ಮೂಲಕ ಸ್ಮೃತಿ ಮಂದಾನ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮಹಿಳಾ ತಂಡವು ಆರ್‌ಸಿಬಿ ಫ್ಯಾನ್ಸ್ ಸಂತಸದ ಹೊಳೆಯಲ್ಲಿ ತೇಲಾಡುವಂತೆ ಮಾಡಿದೆ. ಕರ್ನಾಟಕದಲ್ಲಿ ಈಗ ಆರ್‌ಸಿಬಿ ಅಭಿಮಾನಿಗಳ ಸಂಖ್ಯೆಯೂ ಇನ್ನಷ್ಟು ಹೆಚ್ಚಾಗಿದೆ. ಮುಂದಿನ ದಿನಗಳಲ್ಲಿ ಈ ಸಲ ಕಪ್ ನಮ್ದೆ ಅನ್ನೋ ಆ ಸ್ಲೋಗನ್ ಸೌಂಡ್ ಇನ್ನಷ್ಟು ಜೋರಾಗಲಿದೆ.

ಮಹಿಳಾ ಕ್ರಿಕೆಟ್ ಎಂದರೆ ಮೂಗು ಮುರಿಯುತ್ತಿದ್ದವರೂ, ವಾರೆನೋಟ ಬೀರುತ್ತಿದ್ದವರೂ ಕೂಡ ಈಗ ಬಹಳ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದಾರೆ. ಕೆಲ ವರ್ಷಗಳ ಹಿಂದೆ ಮಹಿಳೆಯರಿಗೂ ಐಪಿಎಲ್ ಮಾದರಿಯ ಟೂರ್ನಿಯ ಪ್ರಸ್ತಾಪ ಬಂದಾಗ ಕೆಲವರು, ಇಡೀ ಭಾರತದಲ್ಲಿ ಐದು ತಂಡಗಳಿಗೆ ಆಗುವಷ್ಟು ಆಟಗಾರ್ತಿಯರೇ ಇಲ್ಲ, ಹುಡುಗಿಯರ ಕ್ರಿಕೆಟ್ ಯಾರು ನೋಡುತ್ತಾರೆ ಎಂದು ಮಹಿಳಾ ಕ್ರಿಕೆಟ್ ಬಗ್ಗೆ ಅಪಹಾಸ್ಯ ಮಾಡಿದ್ದರು. ಆದರೆ ಅಂತಹವರೇ ಇದೀಗ ಲೇಡಿಸ್ ಗ್ರೇಟ್ ಅಂತಾ ಬಣ್ಣಿಸುತ್ತಿದ್ದಾರೆ.

ಇಂತಹದೊಂದು ಐತಿಹಾಸಿಕ ಸಂದರ್ಭದಲ್ಲಿ ಮಹಿಳಾ ಕ್ರಿಕೆಟ್‌ಗೆ ಘನತೆ, ವೃತ್ತಿಪರತೆ ಮತ್ತು ಮಾನ್ಯತೆ ತಂದುಕೊಡಲು ಸತತ ಹೋರಾಟ ಮಾಡಿದ ಭಾರತ ಮಹಿಳಾ ತಂಡದ ಮಾಜಿ ನಾಯಕಿ, ಕರ್ನಾಟಕದ ಶಾಂತಾ ರಂಗಸ್ವಾಮಿ ಅವರನ್ನು ಯಾವುದೇ ಕಾರಣಕ್ಕೂ ಮರೆಯುವಂತಿಲ್ಲ. ಅಂತೆಯೇ ಡಯಾನಾ ಎಡುಲ್ಜಿ, ವಿ.ಕಲ್ಪನಾ, ಮಿಥಾಲಿ ರಾಜ್, ಜೂಲನ್ ಗೋಸ್ವಾಮಿ, ಅಂಜುಮ್ ಚೋಪ್ರಾ ಅವರನ್ನೂ ಕೂಡ ನೆನಪಿಸಿಕೊಳ್ಳಲೇಬೇಕು. ಇಂತಹ ಹೆಣ್ಣು ಹುಲಿಗಳು ಅಂದು ಬಿತ್ತಿದ ಬೀಜ ಇಂದು ಫಲ ಕೊಡುತ್ತಿದೆ ಎಂದೇ ಹೇಳಬಹುದು.

ಬೆಂಗಳೂರಿನಲ್ಲಿ ಈ ಸಲ ನಡೆದ ಡಬ್ಲ್ಯುಪಿಎಲ್ ಟೂರ್ನಿಯ ಎಲ್ಲ ಪಂದ್ಯಗಳನ್ನು ನೋಡಲು ಕ್ರೀಡಾಂಗಣದಲ್ಲಿ ಜನ ಕಿಕ್ಕಿರಿದು ಸೇರಿದ್ದರು. ಅದರಲ್ಲೂ ಆರ್‌ಸಿಬಿ ಪಂದ್ಯ ನಡೆಯುತ್ತಿದ್ದ ವೇಳೆ 28 ಸಾವಿರಕ್ಕೂ ಹೆಚ್ಚು ಜನ ವೀಕ್ಷಿಸಿದರು. ಇದರ ಪ್ರಭಾವದಿಂದಾಗಿ ದೆಹಲಿಯಲ್ಲಿ ನಡೆದ ಪಂದ್ಯಗಳಿಗೂ ಜನ ಸೇರಿದರು. ಇದರಿಂದಾಗಿ ಮುಂದಿನ ವರ್ಷಗಳಲ್ಲಿ ಟೂರ್ನಿಯನ್ನು ಬರೀ ಒಂದು ಅಥವಾ ಎರಡು ನಗರಗಳಲ್ಲಿ ಆಯೋಜಿಸುವ ಬದಲು ???????ಂಚೈಸಿಗಳ ತವರು ನಗರಿಗಳಿಗೂ ವಿಸ್ತರಿಸಲು ಬಿಸಿಸಿಐ ಚಿಂತನೆ ನಡೆಸಿದೆ ಎಂದು ಹೇಳಲಾಗುತ್ತಿದ್ದು, ಇದೊಂದು ಬಹಳ ಒಳ್ಳೆಯ ಬೆಳವಣಿಗೆಯಾಗಿದೆ.

ಮಹಿಳಾ ಕ್ರಿಕೆಟಿಗರಾದರೂ ಸಿಕ್ಸರ್‌ಗಳನ್ನು ಹೊಡೆಯುವ ಸಾಮರ್ಥ್ಯ, ಸ್ಪಿನ್ ಮತ್ತು ಸ್ವಿಂಗ್ ಬೌಲಿಂಗ್‌ನಲ್ಲಿ ಪರಿಣತಿ ಹಾಗೂ ಫೀಲ್ಡಿಂಗ್‌ನಲ್ಲಿ ಚಾಕಚಕ್ಯತೆ ಎಲ್ಲರ ಗಮನ ಸೆಳೆದಿವೆ. ವೃತ್ತಿಪರತೆ ಎದ್ದು ಕಾಣುತ್ತಿದೆ. ಮುಂದಿನ ದಿನಗಳಲ್ಲಿ ಈ ಯಶಸ್ಸು ಮತ್ತು ಆಟಗಾರ್ತಿಯರ ಯಶೋಗಾಥೆಗಳು ಮತ್ತಷ್ಟು ಹೆಣ್ಣುಮಕ್ಕಳನ್ನು ಕ್ರಿಕೆಟ್‌ನತ್ತ ಆಕರ್ಷಿಸುವುದರಲ್ಲಿ ಯಾವುದೇ ಸಂಶಯವಿಲ್ಲ. ಇದರಿಂದ ಭವಿಷ್ಯದಲ್ಲಿ ಮಹಿಳಾ ಕ್ರಿಕೆಟ್ ಕೂಡ ಮತ್ತಷ್ಟು ದೊಡ್ಡಮಟ್ಟದಲ್ಲಿ ಬೆಳೆಯುವ ಸಾಧ್ಯತೆಗಳನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಕೋವಿಡ್ ಕಾಲಘಟ್ಟಕ್ಕಿಂತ ಮೊದಲು ಅಂದರೆ ಐಪಿಎಲ್ ಸಂದರ್ಭದಲ್ಲಿ ಮೂರು ಮಹಿಳಾ ತಂಡಗಳ ಟಿ20 ಚಾಲೆಂಜರ್ಸ್ ಟೂರ್ನಿಯನ್ನು ಪ್ರಾರಂಭಿಸಲಾಗಿತ್ತು. ಕಳೆದ ವರ್ಷ ಪೂರ್ಣಪ್ರಮಾಣದ ಡಬ್ಲ್ಯುಪಿಎಲ್ ಆರಂಭವಾಗಿತ್ತು. ???????ಂಚೈಸಿ ಹಾಗೂ ಮಾಧ್ಯಮ ಹಕ್ಕುಗಳ ಹರಾಜಿನಿಂದ ಮಂಡಳಿಗೆ ಉತ್ತಮ ಆದಾಯವೂ ಹರಿದು ಬಂದಿತ್ತು. ಒಲಿಂಪಿಕ್ ಕೂಟದಲ್ಲಿ ಸೇರ್ಪಡೆಯಾಗಿರುವ ಮಹಿಳಾ ಟಿ20 ಕ್ರಿಕೆಟ್ ಮಾದರಿಯನ್ನು ಭಾರತದಲ್ಲಿ ಬೆಳೆಸಲು ಡಬ್ಲ್ಯುಪಿಎಲ್ ಕೂಡ ನೆರವಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಪುರುಷರ ಕ್ರಿಕೆಟ್ ವೈಭವಕ್ಕೆ ಸವಾಲೆಸೆಯುತ್ತಿರುವ ಕೆಚ್ಚೆದೆಯ ಈ ವನಿತೆಯರ ಗೆಲುವು ಮುಂದೆ ಇನ್ನೊಂದು ಇತಿಹಾಸ ನಿರ್ಮಿಸುವುದರಲ್ಲಿ ಅನುಮಾನವಿಲ್ಲ.

ಇನ್ನು ಇತ್ತೀಚೆಗೆ ನವದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಈ ಐತಿಹಾಸಿಕ ಫೈನಲ್ ಪಂದ್ಯದಲ್ಲಿ ಸ್ಮೃತಿ ಮಂದಾನ ಅವರ ದಿಟ್ಟ ನಾಯಕತ್ವ, ಆಸ್ಟ್ರೇಲಿಯಾದ ಸೋಫಿ ಮಾಲಿನೆ ಹಾಗೂ ಕರುನಾಡಿನ ಹೆಮ್ಮೆಯ ಕುವರಿ ಶ್ರೇಯಾಂಕ ಪಾಟೀಲ ಅವರ ಸ್ಪಿನ್ ಮೋಡಿಯಿಂದಾಗಿ ಆರ್‌ಸಿಬಿ ಗೆಲುವಿನ ಕೇಕೆ ಹಾಕಿತು. ಆಸ್ಟ್ರೇಲಿಯಾದ ತಾರಾ ಆಟಗಾರ್ತಿ ಎಲಿಸ್ ಪೆರಿ, ಸ್ಪಿನ್ನರ್ ಆಶಾ ಶೋಭನಾ, ವಿಕೆಟ್‌ಕೀಪರ್ ರಿಚಾ ಘೋಷ್, ಬೌಲರ್ ರೇಣುಕಾ ಸಿಂಗ್ ಅವರ ಕಾಣಿಕೆಯೂ ಮಹತ್ವದ್ದಾಗಿದೆ. ತಂಡದ ಎಲ್ಲ ಹೆಣ್ಣು ಹುಲಿಗಳ ಛಲ ಹಾಗೂ ಯೋಜನಾಬದ್ಧ ಆಟ ಎಂದೂ ಅಳಿಸಲಾಗದ ಹೊಸ ಇತಿಹಾಸವನ್ನೇ ಬರೆಯಿತು.

ಇಂತಹದೊಂದು ರೋಚಕ ಪಂದ್ಯದಲ್ಲಿ ಆರಂಭದ ಕೆಲವು ಪಂದ್ಯಗಳಲ್ಲಿ ಹೆಚ್ಚು ವಿಕೆಟ್ ಪಡೆಯದ ಕನ್ನಡತಿ ಶ್ರೇಯಾಂಕ ಪಾಟೀಲ ಅವರ ಮೇಲೆ ನಾಯಕಿ ಇಟ್ಟ ವಿಶ್ವಾಸ ಹುಸಿಯಾಗಲಿಲ್ಲ. ತಮ್ಮ ಕೌಶಲ ಸುಧಾರಿಸಿಕೊಂಡು ಫೀಲ್ಡಿಗಿಳಿದ ಆಫ್‌ಸ್ಪಿನ್ನರ್ ಶ್ರೇಯಾಂಕ ಅವರು ಟೂರ್ನಿಯಲ್ಲಿಯೇ ಅತಿ ಹೆಚ್ಚು ವಿಕೆಟ್ ಗಳಿಸಿ ಎಲ್ಲರ ಗಮನ ಸೆಳೆದರು. ಎಲ್ಲರಿಂದಲೂ ಶಹಭಾಶ್ ಎನಿಸಿಕೊಂಡರು. ಅದರಲ್ಲೂ ಎಲಿಮಿನೇಟರ್ ಮತ್ತು ಫೈನಲ್‌ನಲ್ಲಿ ಶ್ರೇಯಾಂಕ ಅವರ ಆಟ ಬಹಳ ಮಹತ್ವದ್ದಾಗಿತ್ತು. ತಂಡದ ಗೆಲುವಿನಲ್ಲಿ ಇವರು ಬಹಳ ಪ್ರಮುಖ ಪಾತ್ರ ವಹಿಸಿದರು. ಕರುನಾಡಿನ ಹೆಮ್ಮೆಯ ಕುವರಿ ಶ್ರೇಯಾಂಕ ಪಾಟೀಲ ಅವರು ಈ ಸಾಧನೆಯ ಮೂಲಕ ಈಗ ಕನ್ನಡಿಗರ ಮನೆಮನೆ ಮಾತಾಗಿದ್ದಾರೆ.

ಒಟ್ಟಿನಲ್ಲಿ ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಕ್ರಿಕೆಟ್ ಟೂರ್ನಿಯ ಎರಡನೇ ಆವೃತ್ತಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮಹಿಳಾ ತಂಡವು ಕಪ್ ಗೆದ್ದು ಹೆಣ್ಮಕ್ಳೇ ಸ್ಟ್ರಾಂಗು ಗುರೂ ಅನ್ನೋದು ಇನ್ನೊಮ್ಮೆ ಸಾಬೀತು ಪಡಿಸಿದೆ. ಅಲ್ಲದೇ ಭವಿಷ್ಯದಲ್ಲಿ ಮಹಿಳಾ ಕ್ರಿಕೆಟ್ ಕೂಡ ಮತ್ತಷ್ಟು ದೊಡ್ಡಮಟ್ಟದಲ್ಲಿ ಬೆಳೆಯುವ ಸಾಧ್ಯತೆಯನ್ನೂ ಹುಟ್ಟುಹಾಕಿದೆ.

–ಮಂಜುನಾಥ.ಎಸ್. ಕಟ್ಟಿಮನಿ
ಹವ್ಯಾಸಿ ಪತ್ರಕರ್ತ ಹಾಗೂ ಲೇಖಕ,ವಿಜಯಪುರ

ಕೊಪ್ಪಳ : ಕಥೆ ಹೇಳಿ ಸಂಭ್ರಮಿಸಿದ ಮಕ್ಕಳು

ಕೊಪ್ಪಳ : ಕೊಪ್ಪಳ ತಾಲೂಕಿ ನಕಿನ್ನಾಳ ಗ್ರಾಮ ಪಂಚಾಯತ ಹಾಗೂ ಜಿಲ್ಲಾಕೇಂದ್ರಗ್ರಂಥಾಲಯ ಕೊಪ್ಪಳ, ಸಂಯುಕ್ತಾಶ್ರಯದಲ್ಲಿ ಮಕ್ಕಳ ಗಟ್ಟಿಓದುಕಾರ್ಯ ಕ್ರಮಜರುಗಿತು. ಮಕ್ಕಳು ಸಂಭ್ರಮದಿಂದ ಪಾಲ್ಗೊಂಡರು. ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಕೇಂದ್ರಗ್ರಂಥಾಲಯ ಕೊಪ್ಪಳದ ಮುಖ್ಯಗ್ರಂಥಾಲಯಾಧಿಕಾರಿ ಯಮನೂರಪ್ಪ ವಟಪರವಿ ಮಕ್ಕಳು ತಮ್ಮ ವಿದ್ಯಾರ್ಥಿಜೀವನದಿಂದಲೇ ಗ್ರಂಥಾಲಯಗಳನ್ನು ಬಳಸಿದರೆ ಉತ್ತಮ ನಾಗರಿಕರಾಗುತ್ತಾರೆ. ಗ್ರಂಥಾಲಯದಲ್ಲಿ ಮಕ್ಕಳಿಗೆ ಇಷ್ಟವಾಗುವಚಿತ್ರಕಥೆ, ಕಥೆ, ಶಿಶುಗೀತೆ ಪುಸ್ತಕಗಳೊಂದಿಗೆ, ಪತ್ರಿಕೆಗಳಲ್ಲಿನ ಮಕ್ಕಳ ಅಂಕಣಗಳು ನಿಮ್ಮಓದುವಿಕೆಗಾಗಿ ನಮ್ಮ ಗ್ರಂಥಾಲಯಗಳು ಸಿದ್ಧವಾಗಿವೆ, ಗ್ರಂಥಾಲಯಗಳನ್ನು ಬಳಸಿಕೊಳ್ಳಿ ಎಂದು ಮಾತನಾಡಿದರು. ಕುವೆಂಪು ಶತಮಾನೋತ್ಸವ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳು ಗಟ್ಟಿಓದು, ಕಟ್ಟುಕಟ್ಟುಕಥೆಕಟ್ಟು, ಕ್ರಿಯಾತ್ಮಕ ಚಟುವಟಿಕೆಗಳನ್ನು ಮಾಡಿಸಲಾಯಿತು. ಮಕ್ಕಳಿಗೆ ಸಾಹಿತಿ, ಸಮೂಹ ಸಂಪನ್ಮೂಲ ವ್ಯಕ್ತಿ ಸುರೇಶ ಕಂಬಳಿ ಪುಟಾಣಿ ಗೊಂಬೆ, ಮಕ್ಕಳ ಕವನವನ್ನು ಹಾಡಿಸಿದರು. ಸಹ ಗ್ರಂಥಪಾಲಕ ನಾಗರಾಜನಾಯಕ ಡೊಳ್ಳಿನ ಯಾರಿಗೂಇದನ ಹೇಳಬಾರದು, ಎಲ್ಲಿರುವೆಎಂಟಾಣೆಆಯ್ದು ಮಕ್ಕಳ ಕವನಗಳನ್ನು ಮಕ್ಕಳೊಂದಿಗೆ ಹೇಳಿಸಿದರು.

ವಿಕೇಂದ್ರೀಕೃತತರಬೇತಿ ಸಂಯೋಜಕರಾದ ಹೆಚ್.ಎಸ್.ಹೊನ್ನುಂಚಿ ಮಕ್ಕಳಿಗೆ ಕೆಲ ಆಟಗಳನ್ನು ಆಡಿಸಿದರು. ಗಟ್ಟಿಓದುಕಾರ್ಯಕ್ರಮದಲ್ಲಿ ಭಾಗವಹಿಸಿದ ವಿಜೇತ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಮೂರನೇತರಗತಿಯಲ್ಲಿ ಸುರಭಿ, ಕೃಷ್ಣ, ಮಂದಾರ, ಅನುಶ್ರೀ ನಾಲ್ಕನೇ ತರಗತಿಯಲ್ಲಿ ಮನೋಜ, ಸ್ವಾತಿ, ಶ್ರೀರಾಮ, ಮಲ್ಲಿಕಾ, ಐದನೇತರಗತಿಯಲ್ಲಿ ಅಶ್ವಿನ, ಸಂಜನಾ,ರವಿಕುಮಾರ, ಸ್ನೇಹಾ ವಿಜೇತ ವಿದ್ಯಾರ್ಥಿಗಳು. ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕ ಮಾರುತಿಆರೇರ್, ಶಿಕ್ಷಕಿಯರಾದ ಸಾವಿತ್ರಿ, ಮೀನಾಕ್ಷಿ, ಜಡೇಶ್ವರಿ, ಕೌಶಲ್ಯ, ಮತ್ತಿತ್ತರರು ಭಾಗವಹಿಸಿದ್ದರು. ಕಿನ್ನಾಳ ಗ್ರಾಮ ಪಂಚಾಯತಅಭಿವೃದ್ಧಿಅಧಿಕಾರಿ ಪರಮೇಶ್ವರಯ್ಯ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಿನ್ನಾಳ ಗ್ರಾಮ ಪಂಚಾಯತಿ ಕಾರ್ಯದರ್ಶಿ ನೀಲಮ್ಮ ನಿರೂಪಿಸಿದರು. ಕಿನ್ನಾಳ ಗ್ರಾಮ ಪಂಚಾಯತಗ್ರಂಥಾಲಯ ಮೇಲ್ವಿಚಾರಕಿಚಂದ್ರಕಲಾ ವಂದಿಸಿದರು.

ಅಕ್ರಮ ಸರಾಯಿ ಮಾರಾಟಗಾರನ ಬಂಧನ

ದಿನಾಂಕ: 22/03/2024 ರಂದು ಬೆಳಗಾವಿ ನಗರದ ಹದ್ದಿಯ ಗ್ಯಾಂಗವಾಡಿಯಲ್ಲಿ ಕಳ್ಳಭಟ್ಟಿ ಸರಾಯಿ ಮಾರಾಟ ಮಾಡುತ್ತಿದ್ದಾರೆಂದು ಬಂದ ಖಚಿತ ಮಾಹಿತಿಯಂತೆ ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಪಿಐ ಮಾಳಮಾರುತಿ ಮತ್ತು ಅವರ ಸಿಬ್ಬಂದಿಯವರ ತಂಡ ದಾಳಿ ಮಾಡಿ 1) ಕಲ್ಪನಾ ರಾಜೇಶ ಲೋಂಡೆ ಸಾ॥ ಗ್ಯಾಂಗವಾಡಿ, ಬೆಳಗಾವಿ 2) ನಿಖಿತಾ ಶುಭಂ ಲೋಂಡೆ ಸಾ॥ ಗ್ಯಾಂಗವಾಡಿ, ಬೆಳಗಾವಿ

ಇವರನ್ನು ವಶಕ್ಕೆ ಪಡೆದುಕೊಂಡು ಅವರ ಬಳಿ ಇದ್ದ, 15 ಲೀಟರ್‌ಗಳ 02 ಟ್ಯೂಬ್ ಸುಮಾರು 30 ಲೀಟರ್‌ಗಳಷ್ಟು ಅಂದಾಜು ಬೆಲೆ ರೂ. 1500/– ಬೆಲೆಯ ಕಳ್ಳಭಟ್ಟಿ ಸರಾಯಿ ಬಾಟಲಿಗಳನ್ನು ಜಪ್ತಪಡಿಸಿಕೊಂಡು ತನಿಖೆ ಮುಂದುವರೆಸಲಾಗಿದೆ.

ಅಕ್ರಮ ಸರಾಯಿ ಮಾರಾಟಗಾರನ ಬಂಧನ

ದಿನಾಂಕ: 21/03/2024 ರಂದು ಬೆಳಗಾವಿ ನಗರದ ಹದ್ದಿಯ ಮಹಾದ್ವಾರ ರೋಡ ಹಳೆ ಪಿಬಿ ರಸ್ತೆ ಹತ್ತಿರ, ಬೆಂಗಾಲಿ ಸವೀಟ ಮಾರ್ಟ ಎಂಬ ಅಂಗಡಿಯ ಪಕ್ಕದ ಬೋಳ ಜಾಗೆಯಲ್ಲಿ ಗೋವಾ ರಾಜ್ಯದ ಅಕ್ರಮ ಸರಾಯಿ ಮಾರಾಟ ಮಾಡುತ್ತಿದ್ದಾನೆಂದು ಬಂದ ಖಚಿತ ಮಾಹಿತಿಯಂತೆ ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಪಿಐ ಮಾರ್ಕೆಟ ಮತ್ತು ಅವರ ಸಿಬ್ಬಂದಿಯವರ ತಂಡ ದಾಳಿ ಮಾಡಿ ಸುಭಾಷ ಸುಧೀರ ಡೇ (43) ಸಾ॥ ಮಹಾದ್ವಾರ ರಸ್ತೆ, ಬೆಳಗಾವಿ ಇವನನ್ನು ವಶಕ್ಕೆ ಪಡೆದುಕೊಂಡು ಅವನ ಬಳಿ ಇದ್ದ, ವಿವಿಧ ಕಂಪನಿಯ ಗೋವಾ ರಾಜ್ಯದ ಸುಮಾರು 102 ಲೀಟರ್ ಅಂದಾಜು ಬೆಲೆ ರೂ. 100500/ಬೆಲೆಯ ಅಕ್ರಮ ಸರಾಯಿ ಬಾಟಲಿಗಳನ್ನು ಜಪ್ತಪಡಿಸಿಕೊಂಡು ತನಿಖೆ ಮುಂದುವರೆಸಲಾಗಿದೆ.

ಅಖಿಲ ಭಾರತ ಜಂಗಮ ಸೇವಾ ಸಮಿತಿಯಿಂದ ರೇಣುಕಾಚಾರ್ಯರ ಹಾಗೂ ಪಂ.ಪುಟ್ಟರಾಜ ಗವಾಯಿಗಳ ಜಯಂತಿ ಆಚರಣೆ

ಗದಗ : ನಗರದ ಮುಳಗುಂದನಾಕಾ ಬಳಿ ಇರುವ ಅಖಿಲ ಭಾರತ ಜಂಗಮ ಸೇವಾ ಸಮಿತಿ ಕಾರ್ಯಾಲಯದಲ್ಲಿ ಸಮಿತಿಯ ವತಿಯಿಂದ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಆಚರಿಸಲಾಯಿತು. ಜಗದ್ಗುರು ರೇಣುಕಾಚಾರ್ಯರ ಹಾಗೂ ಪಂ. ಶ್ರೀ ಪುಟ್ಟರಾಜ ಕವಿಗವಾಯಿಗಳವರ ಭಾವಚಿತ್ರಕ್ಕೆ ವಿಧಿವತ್ತಾಗಿ ಪೂಜೆ ಸಲ್ಲಿಸಲಾಯಿತು.

ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅಖಿಲ ಭಾರತ ಜಂಗಮ ಸೇವಾ ಸಮಿತಿ ಅಧ್ಯಕ್ಷ ಪ್ರಭಯ್ಯ ದಂಡಾವತಿಮಠ ಅವರು ರೇಣುಕಾಚಾರ್ಯರು ಹಾಗೂ ಪಂಚಾಚಾರ್ಯರು ಮಾನವ ಧರ್ಮಕ್ಕೆ ಜಯವಾಗಲಿ ಎನ್ನುವ ಮೂಲಕ ಸಮಸ್ತ ಮಾನವ ಕುಲಕ್ಕೆ ಒಳಿತಾಗಲೆಂಬ ಸಂದೇಶವನ್ನು ಸಾರುವ ಮೂಲಕ ಅಂದಿನಿಂದಲೇ ಎಲ್ಲರು ಒಂದು ಎಂಬ ಭಾವವನ್ನು ಬಿತ್ತಿದವರಾಗಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಮುಳಗುಂದದ ಹಿರಿಯರಾದ ಬಸಯ್ಯ ಅಣ್ಣಿಗೇರಿಮಠ ಅವರು ಮಾತನಾಡಿ, ಜಗದಾದಿ ಜಗದ್ಗುರು ಪಂಚಾಚಾರ್ಯರು ಸರ್ವರಿಗೂ ಲೇಸನ್ನು ಬಯಸಿದರೆ ಪುಟ್ಟರಾಜ ಕವಿಗವಾಯಿಗಳು ಒಳಕಣ್ಣು ತೆರೆದು ಹೊರಕಣ್ಣು ಮುಚ್ಚಿ ಕಣ್ಣಿಲ್ಲದವರಾಗಿ ಕಣ್ಣಾಗಿ ಹೋಗಿದ್ದಾರೆ ಅಂತವರ ಹಾದಿಯಲ್ಲಿ ನಾವು ನಡೆಯೋಣ ಎಂದರು.

ಈ ಸಂದರ್ಭದಲ್ಲಿ ಶಿವಕುಮಾರಸ್ವಾಮಿ, ಕುಮಾರಸ್ವಾಮಿ ಪುರಾಣಿಕಮಠ, ಸಚ್ಚಿದಾನಂದಯ್ಯ, ವೀರಯ್ಯ, ವಿರೇಶ್ವರಸ್ವಾಮಿ, ಉಮಾಪತಿ, ಗುರುಶಾಂತಸ್ವಾಕಿ, ಚನ್ನಯ್ಯಸ್ವಾಮಿ, ವೀರಯ್ಯ ಕಂಬಾಳಿಮಠ, ವೀರಯ್ಯ ಹೊಸಮಠ, ಸಂಗಮ್ಮ ,ಮಲ್ಲಯ್ಯ, ಬಸನಗೌಡ, ಕಾರ್ತಿಕಸ್ವಾಮಿ, ಮಲ್ಲಯ್ಯಸ್ವಾಮಿ ಶಿರೋಳಮಠ ಹಾಗೂ ಅಖಿಲ ಭಾರತ ಜಂಗಮ ಸೇವಾ ಸಮಿತಿಯ ಸರ್ವ ಪದಾಧಿಕಾರಿಗಳು ಉಪಸ್ಥಿತರಿದ್ದರು.

ತಿಲಕವಾಡಿ ಪೋಲೀಸ್‌ರಿಂದ ಹೆರಾಯಿನ್ (ಮಾದಕ ವಸ್ತು) ಮಾರಾಟಗಾರರ ಬಂಧನ

ದಿನಾಂಕ: 21/03/2024 ರಂದು ಬೆಳಗಾವಿ ನಗರದ ವಾಕ್ಸಿನ್ ಡಿಪೋ ಹತ್ತರ ಗಾಂಜಾ ಮಾರಾಟ ಮಾಡುತ್ತಿದ್ದಾರೆಂದು ಬಂದ ಖಚಿತ ಮಾಹಿತಿಯಂತೆ ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಪಿಐ ತಿಲಕವಾಡಿ ಮತ್ತು ಅವರ ಸಿಬ್ಬಂದಿಯವರ ತಂಡ ದಾಳಿ ಮಾಡಿ

1) ದಾದಾಪೀರ ಸುಬಾನ ಪೀರಜಾದೆ ಸಾ॥ ವೀರಭದ್ರ ನಗರ, ಬೆಳಗಾವಿ
2) ತೌಫಿಕ ಸಾ॥ ವೀರಭದ್ರ ನಗರ, ಬೆಳಗಾವಿ
3) ಜಾಹೀದ ಸಾ॥ ರುಕ್ಮಿಣಿ ನಗರ, ಬೆಳಗಾವಿ

ಇವರನ್ನು ವಶಕ್ಕೆ ಪಡೆದುಕೊಂಡು ಅವರ ಬಳಿ ಇದ್ದ, 1.160 ಗ್ರಾಂ ಅಂದಾಜು ಬೆಲೆ ರೂ. 6000/– ಹೆರಯಿನ್ ಎಂಬ ಮಾದಕ ವಸ್ತು ಹಾಗೂ ಹಣ 500/– ರೂ. ಹೀಗೆ ಒಟ್ಟು ರೂ. 6500/– ಮೌಲ್ಯದ ವಸ್ತುಗಳನ್ನು ಜಪ್ತಪಡಿಸಿಕೊಂಡು, ತನಿಖೆ ಮುಂದುವರೆಸಲಾಗಿದೆ.

ಕಾಕತಿ ಪೋಲೀಸ್ ರಿಂದ ಮಟಕಾ ಆಡುತ್ತಿದ್ದವನ ಬಂಧನ

ದಿನಾಂಕ: 2/03/2024 ರಂದು ಮನ್ನೂರ ಗ್ರಾಮ ಜನತಾ ಪ್ಲಾಟ ಹತ್ತಿರ ಸಾರ್ವಜನಕ ರಸ್ತೆಯಲ್ಲಿ ಮಟಕಾ ಆಟ ಆಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದ ಮೇರೆಗೆ ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಕಾಕತಿ ಪೊಲೀಸ್ ಠಾಣೆಯ ಪಿಐ ಹಾಗೂ ಸಿಬ್ಬಂದಿ ಜನರು ದಾಳಿ ಮಾಡಿ, ಆರೋಪಿತ

1] ನಂಗಪ್ಪ ಸಿದ್ದಪ್ಪ ನಾಯಿಕ ಸಾ॥ ಜನತಾ ಪ್ಲಾಟ್, ಮನ್ನೂರ, ಬೆಳಗಾವಿ
2) ನಾಗರಾಜ @ ನಾಗಪ್ಪ ಮುಚ್ಚಂಡಿ ಸಾ॥ ಸೋನಟ್ಟಿ, ಬೆಳಗಾವಿ

ಇವರನ್ನು ವಶಕ್ಕೆ ಪಡೆದುಕೊಂಡು ಅವರಿಂದ ನಗದು 10200/– ಒಂದು ಮೋಬೈಲ್ ಅಕಿ 4000/– ಹೀಗೆ ಒಟ್ಟು ರೂ. 14200/– ರೂ ಹಣ ಜಪ್ತಪಡಸಿಕೊಂಡು ಅವನ ವಿರುದ್ಧ ಕಾನೂನು ಕ್ರಮ ಜರುಗಿಸಿ ತನಿಖೆ ಮುಂದುವರೆಸಲಾಗಿದೆ.

ಮೇಲಿನ ಎಲ್ಲ ಪ್ರಕರಣಗಳನ್ನು ಪತ್ತೆ ಮಾಡಿ ಆರೋಪಿತರನ್ನು ಬಂಧಿಸಿ, ಸ್ವತ್ತು ಜಪ್ತಪಡಿಸಿಕೊಳ್ಳುವಲ್ಲಿ ಶ್ರಮಿಸಿದ ಆಯಾ ಠಾಣೆಯ ಪಿಐ, ಪಿಎಸ್‌ಐ ಮತ್ತು ಸಿಬ್ಬಂದಿಯವರ ಕಾರ್ಯವನ್ನು ಮಾನ್ಯ ಪೊಲೀಸ್ ಆಯುಕ್ತರು, ಡಿಸಿಪಿ (ಕಾ&ಸು), ಡಿಸಿಪಿ (ಅ&ಸಂ), ಬೆಳಗಾವಿ ನಗರ ರವರು ಶ್ಲಾಘಿಸಿರುತ್ತಾರೆ.

ಶಹಾಪೂರ ಪೋಲೀಸ್‌ರಿಂದ ಮಟಕಾ ದಾಳಿ; ಇಬ್ಬರ ಬಂಧನ

ದಿನಾಂಕ: 21/03/2024 ರಂದು ಬೆಳಗಾವಿ ನಗರದ ವಡಗಾಂವ ತೆಗ್ಗಿನ ಗಲ್ಲಿಯಲ್ಲಿ ಮಟಕಾ ಆಟ ಆಡುತ್ತಿದ್ದಾರೆ ಎಂದು ಖಚಿತ ಮಾಹಿತಿ ಬಂದ ಮೇರೆಗೆ ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಪಿಐ ಶಹಾಪೂರ ಹಾಗೂ ಸಿಬ್ಬಂದಿ ಜನರು ದಾಳಿ ಮಾಡಿ, ಆರೋಪಿತರಾದ, 1] ರಾಜಶೇಖರ ವಸಂತ ದವಳಿ ಸಾ: ಮಲಪ್ರಭಾ ನಗರ, ವಡಗಾಂವ ಬೆಳಗಾವಿ 2) ಅಮತ ಅನಂತ ಉಂಡಾಳೆ ಸಾ॥ ಖಾಸಬಾಗ, ಬೆಳಗಾವಿ

ಇವರನ್ನು ವಶಕ್ಕೆ ಪಡೆದುಕೊಂಡು ಅವರಿಂದ ಒಟ್ಟು ರೂ. 2320/– ರೂ ಹಣ ಜಪ್ತಪಡಸಿಕೊಂಡು ಅವರಿಂದ ವಿರುದ್ಧ ಕಾನೂನು ಕ್ರಮ ಜರುಗಿಸಿ ತನಿಖೆ ಮುಂದುವರೆಸಲಾಗಿದೆ.

ಕರ್ನಾಟಕ ಮಾಧ್ಯಮ ರತ್ನ ಪ್ರಶಸ್ತಿಗೆ ಈರಣ್ಣಾ ಹೂಲ್ಲೂರ ಆಯ್ಕೆ

ಯರಗಟ್ಟಿ: ಸುಮಾರು 10 ವರ್ಷಗಳಿಂದ ಯರಗಟ್ಟಿ ತಾಲೂಕಿನ ಪತ್ರಕರ್ತರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಈರಣ್ಣಾ ಹೂಲ್ಲೂರ ಅವರ ಮಾಧ್ಯಮ ಕ್ಷೇತ್ರದ ಸಾಧನೆಗಾಗಿ ಈ ವರ್ಷದ ಕರ್ನಾಟಕ ಮಾಧ್ಯಮ ರತ್ನ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದು ಸಂಘಟಕ ಬಂಗ್ಲೆ ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಬೆಂಗಳೂರಿನ ಎಮ್. ವಿ. ಎಮ್. ಕನ್ವೆನ್ಷನ್ ಹಾಲ್ ನೆಲಮಂಗಲದಲ್ಲಿ ಭಾನುವಾರ ಮಾರ್ಚ್ 24 ರಂದು ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ಪ್ರಸ್ತುತ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ಜಿಲ್ಲಾ ಉಪಾಧ್ಯಕ್ಷರಾಗಿರುವ ಈರಣ್ಣಾ ಹೂಲ್ಲೂರ ಅವರಿಗೆ ಪ್ರಶಸ್ತಿ ಸಿಗುತ್ತಿರುವುದು ಈ ಪ್ರದೇಶದ ಮಾಧ್ಯಮ ಮಿತ್ರರಿಗೆ ಸಲ್ಲುವ ಗೌರವ ಎಂದು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ತಮ್ಮಣ್ಣಾ ಕಾಮಣ್ಣವರ, ಸಾಹಿತಿಗಳಾದ ಡಾ. ರಾಜಶೇಖರ ಬಿರಾದಾರ ಸೇರಿದಂತ ಹಲವರು ಅಭಿನಂದಿಸಿದ್ದಾರೆ.